ಆ) ವಿವಿಧ ಜಾತಿಯ ಮರಗಳ ಸಂಖ್ಯೆ ೪,೭೭.೫೦೦
ಆ ಪೈಕಿ ಬೀಟಿ ಮರಗಳು ೨೯ ಸಂಖ್ಯೆ ಮಾತ್ರ

ಇ) ಆದಾಯ : ರೂ. ೧೭,೯೬,೧೪,೩೪೪,೦೦

ಖರ್ಚು : ರೂ. ೩,೬೪,೭೨,೬೫೭.೦೦

೩೦-೪-೧೯೮೮ರವರೆಗೆ

ಇದಲ್ಲದೇ ರೂ. ೪೭,೯೩,೬೮೪.೧೪ ಡಿಪಾಜಿಟ್ಟಿನಲ್ಲಿ ಇದೆ. ಇದನ್ನು ಗುತ್ತಿಗೆ ಕೆಲಸ ಮುಗಿದ ಮೇಲೆ. ಸರ್ಕಾರದ ಬಾಕಿ ಏನಾದರೂ ಇದ್ದರೆ, ಅದನ್ನು ವಸೂಲಿ ಮಾಡಿ, ಉಳಿಕೆಯದನ್ನು ಗುತ್ತಿಗೆ ದಾರರಿಗೆ ಬಿಟ್ಟುಕೊಡಲಾಗುವುದು.

ಈ) ಈ ವಿಚಾರವು ಭೂ ಸ್ವಾಧೀನ ಅಧಿಕಾರಿಗಳು, ವರಾಹಿ, ಚಕ್ರ ಮತ್ತು ಸಾವೇಹಕ್ಲು, ಹೊಸನಗರ ಇವರ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ

೧೮೩೮. ಶ್ರೀ ಎನ್. ಬಿ. ಅಡ್ಯಂತಾಯ, (ಸುರತ್ಕಲ್).— ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ೧೯೮೬-೮೭ನೇ ಆರ್ಥಿಕ ವರ್ಷದ ಅಂತ್ಯದಲ್ಲಿ ೨.೪೨ ಕೋಟಿ ರೂ.ಗಳ ಕೊರತೆ ಹಣಕಾಸಿನ ಲೆಕ್ಕಪತ್ರಗಳಲ್ಲಿ ಕಂಡು ಬಂದಿರುವುದು ನಿಜವೇ ? ಹಾಗಿದ್ದಲ್ಲಿ ಅವ್ಯವಹಾರಗಳಾಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಕೈಗೊಂಡ ಕ್ರಮಗಳೇನು ?

ಆ) ೩೦-೪-೧೯೮೭ರಂದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿರಬೇಕಾಗಿದ್ದ ಹಣದ ಮೊತ್ತ ಎಷ್ಟು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಮಂಡಳಿಯ ಗಮನಕ್ಕೆ ೫ ಅವ್ಯವಹಾರದ ಪ್ರಕರಣಗಳು ಕಂಡು ಬಂದಿರುತ್ತವೆ. ಇದರ ಒಟ್ಟು ಮೊತ್ತ ೪.೫೪ ಲಕ್ಷ ರೂ.ಗಳು ಈ ಬಗ್ಗೆ ಇತರ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ.

ಆ) ೩೦-೪-೮೭ ರಂದು ಮಂಡಳಿಯಲ್ಲಿದ್ದ ಮತ್ತು ಬ್ಯಾಂಕುಗಳಲ್ಲಿದ್ದ ಶಿಲ್ಕು ಹಣ ಒಟ್ಟು ೧೧,೬೨,೯೮,೩೫೭ ರೂ.ಗಳು.

ದೊಡ್ಡ ಮೂಲಂಗಿ ಗ್ರಾಮದಲ್ಲಿ ವಿದ್ಯುತ್ ಕಂಬ ಸ್ಥಳಾಂತರಿಸುವ ಕುರಿತು

೧೫೭೧. ಶ್ರೀ ಗೋಪಾಲ ಮಂಕಂದ ಕಾನಡೆ (ಸಿರ್ಸಿ).— ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ದೊಡ್ಡಮೂಲಂಗಿ ಗ್ರಾಮದ ಶ್ರೀ ದೊಡ್ಡಸಿದ್ದಪ್ಪ ಚನ್ನಬಸಪ್ಪ ರಾಮದುರ್ಗರವರ ಮನೆಯ ಮೇಲೆ ವಿದ್ಯುತ್ ತಂತಿಯು ಹಾದು ಹೋಗಿರುವುದರಿಂದ ಅಲ್ಲಿ ಜನತೆಗೆ ಹಾಗೂ ಮನೆಯವರ ಜೀವ ಅಪಾಯದ ಅಂಚಿನಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಸದರಿ ಅಪಾಯದಿಂದಿರುವ ವಿದ್ಯುತ್ ತಂತಿಯನ್ನು ಬದಲಾಯಿಸಲು ವಂನವಿ ಮಾಡಿಕೊಂಡು ಅದನ್ನು ಸ್ಥಳಾಂತರಿಸಲು ಸರ್ಕಾರಕ್ಕೆ ನೀಡಬೇಕಾದ ಹಣವನ್ನು ಸಹ ಸಂದಾಯ ಮಾಡಿ ಒಂದು ವರ್ಷ ಗತಿಸಿದರೂ ಹಾಗೂ ಕೆ.ಇ.ಬಿ. ಅಧಿಕಾರಿಗಳು ಬಂದು ಪರಿಶೀಲನೆ ಮಾಡಿ ಸ್ಥಳಾಂತರಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿರುವುದು ನಿಜವಲ್ಲವೆ ?